# 7

# ಕ್ರಿಸ್ತೀಯ ವ್ಯಕ್ತಿತ್ವ

## (ಕೊಲಸ್ಸೆ 3:1-17)

*ಪರಿವರ್ತಿತ ಜೀವಿತವು ಕ್ರೈಸ್ತನ ಜೀವಿತದ ಮಾರ್ಗದಲ್ಲಿ ಕಾಣುತ್ತದೆ ...*

ನಿನ್ನ ವ್ಯಕ್ತಿತ್ವವು ಭಾವನೆ ಮತ್ತು ನಡವಳಿಕೆಗಳ ವಿಶೇಷ ಕಟ್ಟಾಗಿದ್ದು ನೀನು ಏನಾಗಿದ್ದೀಯೋ ಅದನ್ನು ಮಾಡುವಂತವುಗಳು ಆಗಿವೆ. ಪ್ರತಿಯೊಬ್ಬನ ವ್ಯಕ್ತಿತ್ವವು ಒಂದು ರೀತಿಯಲ್ಲಿ ಅನುಪಮವಾಗಿರುತ್ತದೆ. ಹೇಗೋ ಸಾಕಷ್ಟು ಸಾಮಾನ್ಯ ಗುಣಲಕ್ಷಣಗಳನ್ನು ಹೊಂದಿದಂಥ ಕೆಲ ಜನರ ವ್ಯಕ್ತಿತ್ವದ ಬಗೆಗೆ ಮಾನಸಿಕ ತಜ್ಞರು ಮಾತನಾಡುವವರಾಗಿದ್ದು ಅವುಗಳು ಬಾಹ್ಯಪ್ರವೃತ್ತಿಯವರು, ಮತ್ತು ಅಂತರ್ಮುಖಿಗಳೂ, ಯಥೇಚ್ಛರೂ, ಮತ್ತು ನಿಷ್ಕ್ರಿಯರೂ, ಪೀಡಿಸುವವರೂ, ನಿರ್ಭಂಧಿತರೂ ಮುಂತಾದವುಗಳು ಎಂಬ ಗುಂಪುಗಳನ್ನಾಗಿ ಮಾಡುತ್ತಾರೆ.

ಈ ತರ ವ್ಯಕ್ತಿಗಳನ್ನು ವಿಭಾಗಿಸುವದು ಸಾಧ್ಯವಾಗಿದೆ ಯಾಕೆಂದರೆ ಈ ಪದಗಳಿಂದ ವರ್ಣಿತರಾದ ಜನರು ಸಾಮಾನ್ಯವಾಗಿ ಗುರುತರವಾದ ಗುಣಗಳ ಲಕ್ಷಣವನ್ನು ಹೊಂದಿದ್ದು, ಇದು ಕ್ರಿಸ್ತೀಯ ವ್ಯಕ್ತಿತ್ವವನ್ನು ವಿಭಾಗಿಸಲು ಸಹ ಸಾಧ್ಯವಾಗಿದೆ. ಯಾಕೆಂದರೆ ಕ್ರೈಸ್ತರು ಸಾಮಾನ್ಯವಾಗಿ ಗುರುತರವಾದ ಗುಣಗಳ ಲಕ್ಷಣವನ್ನು ಹೊಂದಿರುತ್ತಾರೆ.

ಪ್ರತಿಯೊಬ್ಬ ಕ್ರೈಸ್ತನು ಪ್ರತಿಯೊಂದು ವ್ಯಕ್ತಿತ್ವದ ವಿಷಯಾಂಶದ ಹೋಲಿಕೆಯನ್ನು ಹೊಂದಿರ ಬಹುದು ಎಂದು ಹೇಳಲಾಗದು. ಅಲ್ಲಿ ಎತ್ತರದ ಮತ್ತು ಕುಳ್ಳಾದ, ದೊಡ್ಡ ಮತ್ತು ಸಣ್ಣ ಕ್ರೈಸ್ತರು ಇರುವಂತೆ, ಅದರ ಹಾಗೆಯೇ ಜನರು ಬಾಹ್ಯ ಪ್ರವೃತ್ತಿಯುಳ್ಳವರೂ ಮತ್ತು ಅಂತರ್ಮುಖಿಗಳೂ ಆಗಿರುತ್ತಾರೆ ಅಥವಾ ಯಥೇಚ್ಛ ಅಥವಾ ನಿಷ್ಕ್ರೆಯೆಯ ಕ್ರೈಸ್ತರೂ ಆಗಿರುತ್ತಾರೆ. ಅದಲ್ಲದೆ, ವಿಶ್ವಾಸಿಗಳಾದ ಕ್ರೈಸ್ತನರೆಡೆಗೆ ನೀವು ದೃಷ್ಟಿಹಾಯಿಸಿದಾಗ, ಅವರು ಸಾಮಾನ್ಯವಾಗಿ ಜಗತ್ತಿನಿಂದ ವ್ಯತ್ಯಾಸವಾದ ಗುರುತರವಾದ ಚಿಹ್ನೆಯ ಕೆಲ ಸಂಗತಿಗಳನ್ನು ಹೊಂದಿರುತ್ತಾರೆ ಎಂಬುದನ್ನು ನೀವು ಕಂಡುಹಿಡಿಯುವಿರಿ. ಅವುಗಳನ್ನು ಹೊಂದಿದ ಆ ಲಕ್ಷಣಗಳ ಚಿಹ್ನೆಗಳನ್ನು ನಾವು ಸಾಮಾನ್ಯವಾಗಿ, "ಕ್ರೈಸ್ತೀಯ ವ್ಯಕ್ತಿತ್ವ" ಎಂದು ಕರೆಯು ತ್ತೇವೆ. ಅಂಥ ವ್ಯಕ್ತಿತ್ವಗಳು ಹೇಗಿರುತ್ತವೆ ಮತ್ತು ಅವುಗಳು ಹೇಗೆ ಬೆಳೆಯುತ್ತವೆ? ಕೊಲಸ್ಸೆ 3:1-17 ಈ ಪ್ರಶ್ನೆಗಳಿಗೆ ಮೂರು ಹಂತಗಳನ್ನು ಒಳಗೊಂಡಿರುವ ರೀತಿಯ ಮೂಲಕ ವಿವರಿಸುತ್ತ ಉತ್ತರಿಸುವುದಾಗಿದೆ.

### ಮೊದಲ ಹಂತ: ನಮ್ಮ ಪ್ರಾಥಮಿಕ ಹಂತವು ಕ್ರಿಸ್ತನೊಂದಿಗೆ ಹೊಸ ಸಂಬಂಧದ ಮೂಲಕ ನಮ್ಮ ಜೀವಿತವನ್ನು ಬದಲಾಯಿಸುವದನ್ನು ಗುರುತಿಸಿಕೊಳ್ಳುವದು (ಕೊಲಸ್ಸೆ 3:1-4)

ಕೊಲಸ್ಸೆಯವರು ಪಾಷಂಡಿಗಳಾದ ಬೋಧಕರ ಪ್ರಭಾವದಿಂದಾಗಿ ಅಪಾಯದಲ್ಲಿದ್ದರು. ಪೌಲನು ಹೇಳುವಂತೆ, "ಮನುಷ್ಯರ ಸಂಪ್ರಾದಾಯಗಳನ್ನೂ ಪ್ರಾಪಂಚಿಕ ಬಾಲ ಬೋಧನೆ ಗಳನ್ನೂ ಅನುಸರಿಸುವವರು ನಿಮ್ಮಲ್ಲಿ ಬಂದು ಮೋಸವಾದ ನಿರರ್ಥಕ ತತ್ವಜ್ಞಾನ ಬೋಧನೆ

ಯಿಂದ ನಿಮ್ಮ ಮನಸ್ಸನು ಕೆಡಿಸಿ ನಿಮ್ಮನ್ನು ವಶಮಾಡಿಕೊಂಡಾರು ಎಚ್ಚರಿಕೆಯಾಗಿರ್ರಿ ..." (ಕೊಲಸ್ಸೆ 2:8). ಇಂಥ ಬೋಧಕರು ಪ್ರತ್ಯಕ್ಷವಾಗಿ ವಿಗ್ರಹಾರಾಧನೆಯ (ಕೊಲಸ್ಸೆ 2:8) ಮತ್ತು ಯೆಹೂದಿಗಳ ತತ್ವಜ್ಞಾನ ಬೋಧನೆಯ ಮಿಶ್ರಣವನ್ನು ಕಲಿಸುತ್ತಿದ್ದರು (ಕೊಲಸ್ಸೆ 2:16, 17). ಹೇಗೋ, ಪಾಪದ ಸಮಸ್ಯೆಗೋಸ್ಕರ, ಅವರು ಜಗತ್ತಿನ ಮಾರ್ಗಗಳನ್ನು ಅವರು ಸೂಚಿಸುವವರಾಗಿದ್ದರು ಸುಳ್ಳುಬೋಧಕ ಮಾರ್ಗಗಳನ್ನು ಒಪ್ಪಿಕೊಳ್ಳುವುದರ ವಿರುದಧ ಪೌಲನು ಎಚ್ಚರಿಸುವವನಾಗಿದ್ದಾನೆ: "ಹಿಡಿಯಬೇಡ, ರುಚಿನೋಡದಿರು, ಮುಟ್ಟದಿರು" ಅವುಗಳು ವಂಚಿಸುವಿಕೆಯಿಂದ ಕೂಡಿದ "ಜನರ ಆಜ್ಞೆಗಳು ಮತ್ತು ಬೋಧನೆಗಳು" ಆಗಿರುವಂಥಗಳು ಎನ್ನುತ್ತಾನೆ (ಕೊಲಸ್ಸೆ 2:20-22). ಪ್ರತ್ಯಕ್ಷವಾಗಿ ಈ ತರದ ನಿಬಂಧನೆಗಳು ಅವರು ಕ್ರೈಸ್ತರಾಗುವ ಮುನ್ನ ಅವರ ಲೌಕೀಕ ರೀತಿಯವುಗಳ ಮೋಹದ ಮೇಲೆ ನಿಯಂತ್ರಣವನ್ನು ಇಡುವವುಗಳು ಆಗಿದ್ದವು.

ಈ ನಿಬಂದನೆಗಳು ನಿಷ್ಫಲವಾದವುಗಳು ಎಂದು ಪೌಲನು ಹೇಳುತ್ತಾನೆ ಅವರು, "ಸ್ವಕಲ್ಪಿತ ಧರ್ಮಗಳು ಮತ್ತು ಸ್ವಕಲ್ಪಿತ ಆಚಾರಗಳು ಮತ್ತು ದೇಹದಂಡನೆಯ ಜ್ಞಾನವು ಕಾಣುವಂತಹದ್ದಾಗಿದೆ, ಆದರೆ ಶಾರೀರಕ ಇಚ್ಛೆಗಳನ್ನು ನಿಗ್ರಹಿಸುವುದರಲ್ಲಿ ಯಾವ ಪ್ರಯೋಜನಕ್ಕೂ ಬರುವುದಿಲ್ಲ" (ಕೊಲ್ಲಸ್ಸೆ 2:20-23). ನಿಬಂಧನೆಗಳು ಮತ್ತು ಕಾಯಿದೆಗಳು ಎಂದಿಗೂ ಪಾಪಮಾಡುವದರಿಂದ ನಮ್ಮನ್ನು ದೂರವಿಡಲಾರವು. ಹಾಗಾದರೆ ಯಾವ ಸಂಗತಿಗಳು ಪಾಪದಿಂದ ದೂರವಿರಿಸಲು ಸಾಧ್ಯ?

ಕೊಲಸ್ಸೆ 3:14ರಲ್ಲಿ ಪೌಲನು ಈ ಪ್ರಶ್ನೆಗಳಿಗೆ ಉತ್ತರಿಸುತ್ತಾನೆ: ಕ್ರಿಸ್ತನೊಂದಿಗೆ ನಮ್ಮ ಸಂಬಂಧದ ಅರಿವು ಪಾಪಮಾಡುವುದರಿಂದ ನಮ್ಮನ್ನು ದೂರವಿರಿಸುವುದಾಗಿದೆ. ಪೌಲನು ಹೇಳುವಂತೆ: (1) ನಾವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿದ್ದೇವೆ, ಆದ್ದರಿಂದ ಮೇಲಿನ ಸಂಗತಿಗಳನ್ನು ನಾವು ಎದುರುನೋಡುವವರಾಗಿದ್ದೇವೆ (ವಚನ 1). (2) ನಾವು ಸತ್ತೆವು ಮತ್ತು ನಮ್ಮ ಜೀವಿತವು ಕ್ರಿಸ್ತನ ಜೊತೆಯಲ್ಲಿ ದೇವರಲ್ಲಿ ಅಡಗಿಸಲ್ಪಟ್ಟ ಕಾರಣದಿಂದ, ನಾವು ಮೇಲಣ ಸಂಗತಿಗಳಲ್ಲಿ ನಮ್ಮ ಮನಸ್ಸನ್ನು ಇಡಬೇಕು (ವಚನಗಳು 2, 3). (3) ಕ್ರಿಸ್ತನು ಕಾಣಿಸಿಕೊಂಡಾಗ, ನಾವು ಆತನ ಮಹಿಮೆಯೊಡನೆ ಕಾಣಿಸಿಕೊಳ್ಳುವೆವು ಅದೇ ನಮ್ಮ ಬಹುಮಾನ ಆಗಿದೆ (ವಚನ 4). ಆದ್ದರಿಂದ ನಮ್ಮ ಜೀವಿತದಲ್ಲಿ ಐಹಿಕ ವಾದವುಗಳನ್ನು ಮರಣಕ್ಕೆ ಒಪ್ಪಿಸಬೇಕು (ವಚನ 5).

ಪೌಲನು ವಾದಿಸುರುತ್ತಿರುವ ಉದ್ದೇಶವು ಸ್ಪಷ್ಟವಾಗಿದೆ: ಯಾಕೆಂದರೆ ನಾವು ಕ್ರಿಸ್ತನಿಗೆ ಸೇರಿದವರಾಗಿದ್ದೇವೆ, ನಾವು ಮೇಲಣಸಂಗತಿಗಳನ್ನು ಎದರುನೋಡುವವರಾಗಿದ್ದೇವೆ, ನಾವು ಮೇಲಣ ಸಂಗತಿಗಳ ಮೇಲೆ ಮನಸ್ಸಿಡುವವರಾಗಿದ್ದೇವೆ. ನಮ್ಮಲ್ಲಿನ ಐಹಿಕವಾದವುಗಳನ್ನು ನಾವು ಮರಣಕ್ಕೆ ಒಪ್ಪಿಸುವರಾಗಿದ್ದೇವೆ.

ಕ್ರಿಸ್ತನೊಂದಿಗಿನ ನಮ್ಮ ಸಂಬಂಧವು ನಮ್ಮ ಜೀವಿತವನ್ನು ಬದಲಾಯಿಸುವತ್ತ ನಮ್ಮನ್ನು ಹೇಗೆ ನಡೆಸುವುದಾಗಿದೆ? ಅನೇಕ ಸಂಗತಿಗಳು ನಮ್ಮಲ್ಲಿ ಬರುವಂಥದವುಗಳು ಆಗಿವೆ: (1) ನಾವು ಕ್ರೈಸ್ತರಾದಾಗ, ಕ್ರಿಸ್ತನು ನಮಗೆ ಎಲ್ಲಕ್ಕೂ ಪ್ರಮುಖನಾಗುತ್ತಾನೆ: ಆತನಿಗೋಸ್ಕರವಾದ ನಮ್ಮ ಪ್ರೀತಿಯು ಎಂದರೆ ಲೌಕಿಕವಾದವುಗಳುಗಾಗಿನ ನಮ್ಮ ಪ್ರೀತಿಯು ಕಡಿಮೆಯಾಗಿರಬೇಕು ಎಂದಾಗಿದೆ. (2) ಕ್ರಿಸ್ತನು ನಮ್ಮನ್ನು ಬಲಪಡಿಸುತ್ತಾನೆ ಆದರಿಂದ ನಾವು ಶೋಧನೆಯನ್ನು ಜಯಿಸಬಹುದಾಗಿದೆ. (3) ಕ್ರಿಸ್ತನು ನಮ್ಮನ್ನು ಕ್ಷಮಿಸಿದ್ದಾನೆ ಎಂದಿರುತಿರುವದು ನಾವು ರಕ್ಷಣೆಯಲ್ಲಿ ಇರುವ ಹಾಗೆ ಮಾಡುತ್ತದೆ ಮತ್ತು ಪಾಪವನ್ನು ನಿವಾರಣೆ ಮಾಡುವತ್ತ ನಮ್ಮನ್ನು ಪ್ರೋತ್ಸಾಹಿಸುವದಾಗಿದೆ. (4) ನಾವು ಕ್ರೈಸ್ತರಾಗಿರುವುದರಿಂದ ನಾವು ಜಗತ್ತಿನಲ್ಲಿರುವ ಹಾಗೆ ಇರುವುದಾದರೆ ಅದು ನಮಗೆ ಹೊಂದಿಕೆಯಾಗದು ಎಂದು ನಾವು ತಿಳಿದುರುತ್ತೇವೆ. (5) ನಮ್ಮ ದೇವರು ಎಲ್ಲಾ ಅಧಿಕಾರವನ್ನು ಹೊಂದಿರುವುದರಿಂದ, ನಾವು ಆತನ ವಾಕ್ಯಗಳನ್ನು ಕೇಳಬೇಕು ಮತ್ತು ಆತನಿಗೆ ವಿಧೇಯರಾಗಬೇಕು; ಆತನ

ಬೋಧನೆಗಳನ್ನು ಅನುಸರಿಸುವುದರ ಮೂಲಕ ನಾವು ಪಾಪವನ್ನು ಹತ್ತಿಕ್ಕಬಹುದು ಮತ್ತು ಕ್ರಿಸ್ತೀಯ ವ್ಯಕ್ತಿತ್ವವನ್ನು ಬೆಳಸಿಕಳ್ಳಬಹುದು.

ನಾವು ಕ್ರಿಸ್ತೀಯ ವ್ಯಕ್ತಿತ್ವವನ್ನು ಬೆಳಸಿಕೊಳ್ಳಲು ಅಸಮರ್ಥರಾಗಿರಬಹುದು. ಯಾಕೆಂದರೆ ನಾವು ಮೊದಲನೆಯ ಈ ಹಂತವನ್ನು ತೆಗೆದು ಕೊಂಡಿರಲ್ಲದಿರುವುದೇ ಆಗಿರಬಹುದು. ನಾವು ತಪ್ಪಾದ ಉದ್ದೇಶದ ಮೇಲೆ ಆತನು ಕೊಂಡಿರುವಂತವರಾಗಿರುತ್ತೇವೆ. ನರಕವನ್ನು ತಪ್ಪಿಸಿಕೊಳ್ಳುವ ಇಚ್ಛೆ ಮತ್ತು ಹೊಸ ಒಡಂಬಡಿಕೆಯಲ್ಲಿನ ಸೂಚನೆಗಳನ್ನು ನೋಡುವ ಹಾಗೆ ನರಕದಿಂದ ಹೊರಗೆ ಇರುವುದಾದರೆ ನಾವು ಇಟ್ಟುಕೊಳ್ಳ ಬಹುದಾದ ಅನೇಕ ನಿಯಮಗಳು ಹಾಗೂ ನಿಬಂಧನೆಗಳು ವಿಶಿಷ್ಟವಾಗಿ ನಮ್ಮನ್ನು ಪ್ರೇರೇಪಿಸುತ್ತವೆ. ಕ್ರೈಸ್ತತ್ವಕ್ಕೆ ಅಂಥ ಒಂದು ಮಾರ್ಗವು "ಸ್ವಕಲ್ಪಿತ ಧರ್ಮಗಳು ಮತ್ತು ಸ್ವಕಲ್ಪಿತ ಆಚಾರಗಳು ಮತ್ತು ದೇಹದಂಡನೆ ಜ್ಞಾನವು ಕಾಣುವಂತದ್ದಾಗಿದೆ" (ಕೊಲಸ್ಸೆ 2:20-23). ಆದರೆ ಕೊನೆಯಲ್ಲಿ, "ಶಾರೀರಿಕ ಇಚ್ಛೆಗಳನ್ನು ನಿಗ್ರಹಿಸುವುದರಲ್ಲಿ ಯಾವ ಪ್ರಯೋಜನಕ್ಕೂ ಬರುವುದಿಲ್ಲ" ಎಂದು ಪೌಲನು ಹೇಳುತ್ತಾನೆ. ನಾವು ಇಹಲೋಕದ ನಿಬಂಧನೆಗಳನ್ನು ಬಹುಕಾಲದವರೆಗೆ ಆತುಕೊಳ್ಳುವವರಾಗಿದ್ದೇವೆ ಮತ್ತು ಕ್ರಿಸ್ತನೊಂದಿಗೆ ಸಂಬಂಧವು ಕ್ರಿಸ್ತನಿಗಾಗಿ ಜೀವಿಸುವ ನಮ್ಮ ಉದ್ದೇಶದಂತೆ ಬಲು ಕಡಿಮೆಯಾಗಿರುತ್ತದೆ.

## ಎರಡನೆಯ ಹಂತ: ಇಹಲೋಕದ ಆಶೆಗಳನ್ನು ಸಾಯಿಸಿರಿ (ಕೊಲಸ್ಸೆ 3:5-11)

ನಾವು ಇಹಲೋಕದ ಭಾವಗಳನ್ನು "ಸಾಯಿಸಬೇಕು" (ವಚನ 5), ನಾವು "ಇವುಗಳನ್ನು ವಿಸರ್ಜಿ"ಸಲೇಬೇಕು (ವಚನ 8), ಮತ್ತು ನಾವು "ಪೂರ್ವ ಸ್ವಭಾವವನ್ನು ತೆಗೆದುಬೇಡ ಬೇಕು" (ವಚನ 9) ಎಂದು ಪೌಲನು ಹೇಳುವುದನ್ನು ಗಮನಿಸಿರಿ. ನಾವು ಪಾಪಮಯವಾದ ಗುಣಗಳನ್ನು "ಸಾಯಿಸಬೇಕು," "ವಿಸರ್ಜಿಸಬೇಕು," "ತೆಗೆದುಬಿಡಬೇಕು" ಲೋಕದ ಆಶೆಗಳ ಜೊತೆ ಸಹಜೀವನ ನಡೆಸಬಹುದು ಎಂದು ನೀನು ಯೋಚಿಸದಿರು! ಅವುಗಳನ್ನು ಬಿಡುಗಡೆ ಮಾಡಲು ಸಿದ್ಧನಾಗು! ಅವುಗಳಿಂದ ದೂರವಿರು, ಅವಗಳನ್ನು ಸಾಯಿಸು, ಕಸದ ಬುಟ್ಟಿಯಲ್ಲಿ ಎಸೆ, ನಿನ್ನ ಜೀವನದಿಂದ ಹೊರಗೆ ಹಾಕು, ಅವುಗಳನ್ನು ನಿನ್ನ ಜೀವದಿಂದ ಹೊರಗೆ ಹಾಕು, ನಿನ್ನ ಲಕ್ಷಣಗಳಿಂದ ಅವುಗಳನ್ನು ಅಳಿಸಿಬಿಡು!

ನಾವು ಯಾವ ಸಂಗತಿಗಳನ್ನು ಮರಣಕ್ಕೆ ಒಪ್ಪಿಸಬೇಕು?

### ಕಾಮದ ಪಾಪವನ್ನು ನಾಶ ಮಾಡು

"ನಿಮ್ಮಲ್ಲಿರುವ ಭೂಸಂಬಂಧವಾದ ಭಾವಗಳನ್ನು ಸಾಯಿಸಿರಿ, ಜಾರತ್ವ, ಬರಡುತನ, ಕಾಮಾಭಿಲಾಷೆ ದುರಾಶೆ ... ಲೋಭ ... ಇವುಗಳನ್ನು ವಿಸರ್ಜಿಸಿಬಿಡಿರಿ" (ಕೊಲಸ್ಸೆ 3:5). ಜಾರತ್ವವು "ವ್ಯಭಿಚಾರ" ಎಂದು ಭಾಷಾಂತರಿಸಲ್ಪಟ್ಟಿದೆ (NEB) ಮತ್ತು "ಲೈಂಗಿಕ ಅನೈತಿಕತೆ" (Phillips). "ಅಪವಿತ್ರತೆ"ಯು ಸಹ "ಅಶುದ್ಧವಾದುದ್ದು" "ಹೊಲಸುಮನಸ್ಸಿವ" (Phillips) ಅಥವಾ "ಅವಮರ್ಯಾದೆ" (NEB) ಎಂದು ಭಾಷಾಂತರವಾಗಿದೆ. "ಕಾಮಾಭಿಲಾಷೆ"ಯು "ಮಿತಿಮೀರಿದ ಅನುರಾಗ" (KJV) "ಅನಿಯಮಿತ ಕಾಮಾಭಿಲಾಷೆ" (Phillips) ಮತ್ತು "ಕಾಮ" (NEB) ಎಂದು ಇತರ ಭಾಷಾಂತರಗಳಲ್ಲಿ ಕಾಣುತ್ತೇವೆ. "ದುರಾಶೆ"ವು ಸಹ "ಕೆಟ್ಟ ಲೋಲಾಪ್ತಿ" ಮತ್ತು "ಅಸಹ್ಯವಾದ ಹಪಾಹಪಿ" (NEB) ಎಂದು ಭಾಷಾಂತರಿಸಲ್ಪಟ್ಟಿದೆ.

ನೀವು "ಜಾರತ್ವ," "ಬರಡುತನ," "ಕಾಮಾಭಿಲಾಷೆ ಮತ್ತು ದುರಾಶೆ" ಎಂಬಂಥ ಪದಗಳನ್ನು ಪದಗಳನ್ನು ಕೇಳಿದಾಗ ನಿಮ್ಮ ಮನಸ್ಸಿನಲ್ಲಿ ಏನು ಬರುತ್ತದೆ? ನಾನೇನನ್ನೂ ಮಾಡಲಾರೆ ಆದರೆ ನಮ್ಮ ಆಧುನಿಕ ಕಾಲದ ಬಗೆಗೆ ಯೋಚಿಸಿರಿ. ನೀವು ದೂರದರ್ಶನ ಕಾರ್ಯಕ್ರಮವನ್ನು ಹೇಗೆ ಹೊಂದುವಿರಿ, ಅದರಲ್ಲೂ ವಿಶೇಶವಾಗಿ ಧಾರವಾಹಿ ಕಾರ್ಯಕ್ರಮಗಳು, ದೊಡ್ಡದಿಲ್ಲದ "ಜಾರತ್ವ," "ಬರಡುತನ," "ಕಾಮಾಭಿಲಾಷೆ" ಮತ್ತು

“ದುರಾಶೆ” ಗಳನ್ನು ತೋರಿಸುವವುಗಳಲ್ಲವೇ? ಅಲ್ಲದೇ, ಅಂಥ ಸಂಗತಿಗಳೂ ಸಹಿತ ಲೋಕ ವನ್ನು ವರ್ಣಿಸುವವುಗಳು ಆಗಿವೆ ಹೊರತು ಅವುಗಳು ಕ್ರೈಸ್ತರನ್ನು ವರ್ಣಿಸುವಂಥವುಗಳು ಅಲ್ಲ!

ಈ ಪರಿಚ್ಛೇದವು ಕೇವಲ ವ್ಯಭಿಚಾರವನ್ನು ಮಾತ್ರವಲ್ಲ ಅದರ ಜೊತೆಗೆ ಕಾಮದ ಪಾಪವನ್ನು ಸಹ ಬೈಬಲ್ ಖಂಡಿಸುತ್ತದೆ ಎಂದು ಗಮನಿಸುವದು ಅವಶ್ಯವಾಗಿದೆ. ಕ್ರೈಸ್ತರು ಕಾಮದ ಪಾಪದಲ್ಲಿ ಇರಲೇಬಾರದು! ಅದಕ್ಕಿಂತಲೂ, ಹೆಚ್ಚಾಗಿ, ಆತ ಅಥವಾ ಆಕೆ ರಾಮ ದೆಡೆಗೆ ನಡೆಸುವ ಪರಿಸ್ಥಿತಿಗಳನ್ನು ದೂರವಿರಿಸಬೇಕು. ಮತ್ತು ಇತರರನ್ನು ಕಾಮದೆಡೆಗೆ ಒಯ್ಯುವ ಸಂಗತಿಗಳನ್ನು ಮಾಡದೇ ದೂರವಿರಿಸಬೇಕು. ಅಶ್ಲೀಲಸಾಹಿತ್ಯಗಳಿಂದ, ದೂರವಿರಲು, ಕಾಮಕ್ಕೆ ಸಂಬಂಧಿಸಿದಂತಹ ಸಂಗತಿಗಳಿಗೆ ಹೊಂದಿಕೊಂಡ ನೃತ್ಯದಂತಹ ಚಟುವಟಿಕೆಗಳನ್ನು ದೂರವಿರಿಸಲು, ಆಧುನಿಕ ತರದ ವೇಷಭೂಷಗಳಿಂದ ದೂರವಿರಲು ನಮಗೆ ಶಕ್ತಿಶಾಲಿಯಾದ ಪ್ರೇರಕಗಳು ಇವೆ.

ಅನೈತಿಕ ವಿಚಾರಗಳಿಂದ ಹೂಗೂ ಕಾಮುಕ ವಿಚಾರಗಳಿಂದ ನಮ್ಮನ್ನು ನಾವು ಯಾಕೆ ದೂರವಿರಿಸಿಕೊಳ್ಳಬೇಕು? “ಇವುಗಳ ನಿಮಿತ್ತ ದೇವರ ಕೋಪವು ಉಂಟಾಗುತ್ತದೆ” (ಕೊಲಸ್ಸೆ 3:6). ಈ ಪಾಪಗಳಿಂದ ನಾವು ಕೆಲಕಾಲ ಮಾತ್ರ ದೂರವಿರಲು ಸಾಧ್ಯ. ಆದರೆ ಯೇಸು ಕ್ರಿಸ್ತನು ಬರುವಾಗ ಅದರ ಲೆಕ್ಕವನ್ನು ತೀರಿಸುತ್ತಾನೆ. ಯಾರು ಲೌಕಿಕ ತರವನ್ನು ಬಿತ್ತುತ್ತಾರೆ ಅವರು ದೇವರ ಕೋಪವನ್ನು ಕೊಯ್ಯುತ್ತಾರೆ!

**ಲೋಭದ ಪಾಪವನ್ನು ಸಾಯಿಸಿರಿ**

“ಭೂಸಂಬಂಧವಾದ ಭಾವಗಳನ್ನು ಸಾಯಿಸಿರಿ, ... ದುರಾಶೆ, ವಿಗ್ರಹಾರಾಧನೆಗೆ ಸಮಾನಾಗಿರುವ ಲೋಭ” (ಕೊಲಸ್ಸೆ 3:5) ಎಂದು ಪೌಲನು ಹೇಳುತ್ತಾನೆ. ಈ ಪದವನ್ನು ಫಿಲಿಪ್ಪಿಯು “ಬೇರೆ ಜನರ ಸಂಗತಿಗಳಿಗೋಸ್ಕರವಾದ ಕಾಮ” ಎಂದು ಭಾಷಾಂತರಿಸಿದೆ. ಮತ್ತೇ, ಈ ಎಚ್ಚರಿಕೆಯು ನಮ್ಮ ಜಗತ್ತಿಗೆ ವಿಶೇಷವಾಗಿ ಅವಶ್ಯವಿದೆ. ಆಧುನಿಕ ವಾಣಿಜ್ಯದ ಹಿಂದಿರುವ ಸತತವಾಗಿ ಪ್ರೇರೇಪಿಸುವ ಶಕ್ತಿಯು ಲೋಭವೇ ಆಗಿದೆ.

ಪೌಲನು ಲೋಭವನ್ನು ವಿಗ್ರಹಾರಾಧನೆಗೆ ಹೋಲಿಸಿರುವದ ಒಂದು ಕುತೂಹಲಕಾರಿಯಾದ ಸಂಗತಿಯಾಗಿದೆ. ಆಧುನಿಕ ಅಮೇರಿಕೆಯಲ್ಲಿ ವಿಗ್ರಹಾರಾಧನೆಯು ಪ್ರತ್ಯಕ್ಷವಾಗಿ ಎಷ್ಟಿದೆ; ಜನರು ಕಟ್ಟಿಗೆಯಿಂದ ಮತ್ತು ಕಲ್ಲಿನಿಂದ ಮಾಡಿದ ವಿಗ್ರಹಗಳ ಮುಂದೆ ಅಡ್ಡಬೀಳುತ್ತಿದ್ದಾರೆ ಅಥವಾ ಇಲ್ಲವೋ ಎಂಬುದು ನಮಗೆ ತಿಳಿಯದು. ಆದರೆ ಈ ತರದ ವಿಗ್ರಹಾರಾಧನೆಗೆ ದೊಡ್ಡ ವ್ಯವಹಾರವು ನಡೆದಿದೆ. ಜನರು ದೇವರ ಮುಂದೆ ಲೋಹಿಯ ವಸ್ತುಗಳನ್ನು ಅರ್ಜನೆ ಮಾಡುತ್ತಿದ್ದಾರೆ; ಆದರಿಂದಾದ ಆ ವಸ್ತುಗಳೇ ಅವರ ದೇವರಾಗಿ ಪರಿಣಮಿಸುತ್ತವೆ. ಅದೇ ಲೋಭ ... ಅದೇ ವಿಗ್ರಹಾರಾಧನೆ ... ಮತ್ತು ಅದೇ ಪಾಪವಾಗಿದೆ ... ಮತ್ತು ದೇವರ ಕೋಪವನ್ನು ನಮ್ಮ ಮೇಲೆ ತರುವುದಾಗಿದೆ!

**ಕೋಪದ ಪಾಪವನ್ನು ವಿಸರ್ಜಿಸಿರಿ**

“ಈಗಾಲಾದರೋ ಕ್ರೋಧ ಕೋಪ ಮತ್ಸರ ದೂಷಣೆ ... ಇವುಗಳನ್ನು ವಿಸರ್ಜಿಸಿಬಿಡಿರಿ” ಎಂದು ಪೌಲನು ಹೇಳುತ್ತಾನೆ (ಕೊಲಸ್ಸೆ 3:8). “ಕೆಟ್ಟ ಕೋಪ,” ಎಂದು ಸಹ ಭಾಷಾಂತರ ವಾಗಿರುವ “ಕೋಪವನ್ನು” ನಾವು ದೂರವಿರಿಸಬೇಕು. ಕೋಪಮಾಡಿಕೊಳ್ಳುವದು ಯಾವಾ ಗಲೂ ತಪ್ಪಾದುದ್ದು ಅಲ್ಲ (ಎಫೆಸ 4:26). ಆದರೆ ಒಂದು ನಿಶ್ಚಿತ ಪ್ರಕಾರದ ಕೋಪವು ತಪ್ಪಾದದ್ದು ಆಗಿದೆ. ಯಾವುದೇ ತರದ ಕೋಪವು ತಪ್ಪು ಮಾಡುವುದಕ್ಕೆ ನಡೆಸುವುದಾಗಿದೆ! ಕೋಪವನ್ನು ವಿಸರ್ಜಿಸಿರಿ! ಪೌಲನು ಹೇಳುವಂತೆ ನಾವು “ಕ್ರೋಧವನ್ನೂ” ಸಹ ದೂರ ಇಡಬೇಕು ಎಂಬುದು “ಭಯಂಕರವಾದ ಅಕ್ರೋಶ” (Phillips) ಮತ್ತು “ಉದ್ರೇಕ” ದಂತೆ

(NEB) ಎಂದು ಇದು ಭಾಷಾಂತರವಾಗಿದೆ. "ಮತ್ಸರವನ್ನೂ" ಸಹ ದೂರವಿರಿಸಬೇಕು. ಫಿಲಿಪ್ಸ್ ಈ ಪದವನ್ನು "ಕೆಟ್ಟ ಯೋಚನೆಗಳು" ಎಂದು ಭಾಷಾಂತರಿಸಿದೆ. ನಾವು ನಮ್ಮ ಸಂಯಮವನ್ನು ಕಳೆದು ಕೊಳ್ಳುವುದರಿಂದ ದೂರವಿರಬೇಕೆಂದು ಮಾತ್ರವಲ್ಲ; ನಾವು ಅಸಮಾಧಾನವನ್ನು ಕೂಡಾ ಇಟ್ಟುಕೊಳ್ಳಬಾರದು, ನಮ್ಮ ವಿರುದ್ಧವಾಗಿ ತಪ್ಪುಮಾಡಿದವರ ವಿರುದ್ಧ ಮತ್ಸರವನ್ನು ನಮ್ಮ ಹೃದಯದಲ್ಲಿ ನೆಲೆಯೂರಿಸಿಕೊಳ್ಳುವದು ತಪ್ಪು ಆಗಿದೆ.

**ಬಾಯಿಂದ ಮಾಡುವ ಪಾಪವನ್ನು ಸಾಯಿಸಿರಿ**

"... ದೂಷಣೆ ಬಾಯಿಂದ ಹೊರಡುವ ದುರ್ಭಾಷೆ ಇವುಗಳನ್ನು ವಿಸರ್ಜಿಸಿಬಿಡಿರಿ. ಒಬ್ಬರಿಗೊಬ್ಬರು ಸುಳ್ಳಾಡಬೇಡಿರಿ ..." ಎಂದು ಪೌಲನು ಹೇಳುತ್ತಾನೆ (ಕೊಲಸ್ಸೆ 3:8, 9). "ದೂಷಣೆ," ಯೆಂಬ ಈ ಪದವು ಇನ್ನೊಂದೆಡೆಯಲ್ಲಿ "ದೇವದೂಷಣೆ," "ದೇವರ ಬಗೆಗೆ ಆಡುವ ಕೆಟ್ಟ ಮಾತುಗಳು," (Phillips), "ಶಾಪ" (NEB); ಎಂದಾಗಿದ್ದು ಅದನ್ನು ವಿಸರ್ಜಿಸಬೇಕು; "ನಿಮ್ಮ ಬಾಯಿಂದ ಹೊರಡುವ ದುರ್ಭಾಷೆ" ಇದು "ಅಸಹ್ಯ ಸಂಭಾಷಣೆ" ಎಂಬಂತೆ; ಮತ್ತು "ಅಸಹ್ಯಮಾತುಗಳು" NEBಯಲ್ಲಿ ಮತ್ತು "ಸುಳ್ಳು ಹೇಳುವದು" ಎಂದು ಭಾಷಾಂತರವಾಗಿದೆ.

ಒಬ್ಬ ಕ್ರೈಸ್ತನ ತನ್ನ ನಾಲಿಗೆಯನ್ನು ನಿಯಂತ್ರಣ ಪ್ರಯತ್ನವನ್ನು ಮಾಡುತ್ತಾನೆ, ಆ ಪ್ರಯತ್ನವು ಶಪಿಸುವ ಮೂಲಕ, ಅಥವಾ ಅಸಹ್ಯಕರ ಮಾತುಗಳಿಂದ, ಅಥವಾ ಸುಳ್ಳು ಹೇಳುವ ಮೂಲಕ ಹೀಗೆ ಯಾವುದೇ ರೀತಿಯಲ್ಲಿ ತನ್ನ ತುಟಿಗಳಿಂದಾಗುವ ಪಾಪವನ್ನು ದೂರವಿರುಸುವದೇ ಆಗಿದೆ. ಅದು ಸುತ್ತಲಿನ ಜನರಿಂದ ಆತನನ್ನು ಎಷ್ಟು ಭಿನ್ನವಾಗಿ ಮಾಡುತ್ತದಲ್ಲ!

ಈ ಎಲ್ಲಾ ಸಂಗತಿಗಳನ್ನು ಒಬ್ಬ ಕ್ರೈಸ್ತನು ವಿಸರ್ಜಿಸುವುದು ಹೇಗೆ? ಯಾಕೆಂದರೆ ಅಂಥ ಮಾರ್ಗಗಳಲ್ಲಿ ಜೀವಿಸುವದು ಮತ್ತು ಮಾತನಾಡುವದು ನಿನ್ನ ಹೊಸ ಸನ್ನಿವೇಶಗಳ ಜೊತೆಗೆ ಹೊಂದಾಣಿಕೆಯಾಗಲಾರದು. ಈ ಪಾಪಗಳಿಗೆ ಸಂಬಂಧಿಸಿದಂತೆ ಪೌಲನು ಹೀಗೆ ಹೇಳುತ್ತಾನೆ. "ನೀವೂ ಸಹ ... ಅಧೀನದಲ್ಲಿದ್ದು ಈ ಕೆಲಸಗಳನ್ನು ನಡೆಸುತ್ತಿದ್ದಿರಿ" (ವಚನ 7). ಆದರೆ ಅವುಗಳನ್ನೆಲ್ಲ ತ್ಯಜಿಸಿಬಿಡಬೇಕು.

> ... ನೀವು ಪೂರ್ವಸ್ವಭಾವವನ್ನು ಅದರ ಕೃತ್ಯಗಳನ್ನು ಕೂಡಾ ತೆಗೆದಿಟ್ಟು ನೂತನ ಸ್ವಭಾವವನ್ನು ಧರಿಸಿಕೊಂಡಿದ್ದೀರಲ್ಲವೇ. ಈ ಸ್ವಭಾವವು ಅದನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ದಿನೇ ದಿನೇ ನೂತನವಾಗುತ್ತಾ ಪೂರ್ಣಜ್ಞಾನವನ್ನು ಉಂಟುಮಾಡುತ್ತದೆ. ಇದನ್ನು ಧರಿಸಿಕೊಂಡಿರುವುದರಲ್ಲಿ ಭೇದವಿಲ್ಲ ... (ಕೊಲಸ್ಸೆ 3:9-11).

ನಿನ್ನ ಜೀವಿತವು ಬದಲಾಗಿದೆ! ನೀನು ಈ ಕ್ರೈಸ್ತನಾಗಿದ್ದಿ! ಅದರ ಹಾಗೆ ಜೀವಿಸು! ಪೂರ್ವದಲ್ಲಿ, ಎಲ್ಲಾ ರೀತಿಯ ಪಾಪಗಳಿಂದ ನೀನು ದೋಷಿಯಾಗಿದ್ದಿ, ಆದರೆ ಇನ್ನು ಮುಂದೆ ನೀನು ಆ ರೀತಿಯಲ್ಲಿ ಜೀವಿಸಲಾರಿ! ಅದಕ್ಕಿಂತ ಹೆಚ್ಚಾಗಿ, "ಕ್ರಿಸ್ತನು ಎಲ್ಲವೂ ಆಗಿದ್ದಾನೆ, ಮತ್ತು ಎಲ್ಲರಲ್ಲಿದ್ದಾನೆ" ಎಂದಿರುವಾಗಿನಿಂದ, ನಿನ್ನ ಜೀವಿತವು ಈಗಲೂ ಆತನಿಂದ ಹೆಚ್ಚಾಗಿ, "ಕ್ರಿಸ್ತನು ಎಲ್ಲವೂ ಆಗಿದ್ದಾನೆ, ಮತ್ತು ಎಲ್ಲರಲ್ಲಿದ್ದಾನೆ" ಎಂದಿರು ವಾಗಿನಿಂದ, ನಿನ್ನ ಜೀವಿತವು ಈಗಲೂ ಆತನಿಂದ ಆವರಿಸಲ್ಪಟ್ಟಿದೆಯೇ ಹೊರತು ಜಗತ್ತಿನಿಂದಲ್ಲ!

## ಮೂರನೆಯ ಹಂತ: ಕ್ರಿಸ್ತೀಯ ಲಕ್ಷಣಗಳನ್ನು ಧರಿಸಿಕೊಳ್ಳಿರಿ (ಕೊಲಸ್ಸೆ 3:12-17)

ಕೊಲಸ್ಸೆ 3:12-17ರಲ್ಲಿ, ಬಳಸಲಾದ ಉದಾಹರಣೆಯು ಬದಲಾಯಿಸುವ ಬಟ್ಟೆ ಆಗಿದೆ. ನಾವು ನಮ್ಮ ಹಿಂದಿನ ಸ್ವಭಾವವನ್ನು ನಾವು ಮರಣಕ್ಕೆ ಒಪ್ಪಿಸಬೇಕು, ಈ ಇಹಲೋಕದ

ಲಕ್ಷಣಗಳನ್ನು ಬಿಟ್ಟು, ನಾವು ಕ್ರಿಸ್ತೀಯ ಲಕ್ಷಣಗಳನ್ನು ಹೊಸ ಬಟ್ಟೆಗಳ ಹಾಗೆ ಧರಿಸಿಕೊಳ್ಳ ಬೇಕು ಎಂದು ಪೌಲನು ಹೇಳುತ್ತಾನೆ.

ಒಬ್ಬನನ್ನು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಬದಲಾಯಿಸುವಂತಿರುವದೇ ಕ್ರೈಸ್ತನಾಗಿರುವುದಾಗಿದೆ (ಕೊಲಸ್ಸೆ 1:13, 14); ಇದು ಮರುಹುಟ್ಟಿನಂತಿರುವುದಾಗಿದೆ (ಯೋಹಾನ 3:3-5; 1 ಪೇತ್ರ 2:2); ಇದು ಮರಣದಿಂದ ಎಬ್ಬಿಸಿದ ಹಾಗೆ ಇರುತ್ತದೆ (ಎಫೆಸ 2:1). ಆದರೆ ಇದು ಬದಲಾಯಿಸಿದ ಹಾಗೆಯೂ ಇರುವುದಾಗಿದೆ. ಯೆಶಾಯನು ದೇವರು ತನಗೆ "ರಕ್ಷಣೆಯೆಂಬ ವಸ್ತ್ರವನ್ನು" ಹೊದಿಸಿದ್ದಾನೆ ಎಂದು ಹರ್ಷಿಸಿದನು (ಯೆಶಾಯ 61:10). ತಪ್ಪಿಹೋದ ಮಗನ ರಕ್ಷಣೆಯು ನಿಲುವಂಗಿಯನ್ನು ತೊಡಿಸುವುದಕ್ಕೆ ಚಿಹ್ನೆಯನ್ನಾಗಿದೆ (ಲೂಕ 15:22). ಮದುವೆ ಔತಣದ ಸಾಮ್ಯದಲ್ಲಿ ಯೇಸು ರಕ್ಷಣೆಯನ್ನು ಬದಲಾಯಿಸುವ ಬಟ್ಟೆಯ ಸಂಕೇತದಲ್ಲಿ ಬಳಸಿದ್ದಾನೆ (ಮತ್ತಾಯ 22:11-14). ಪರಲೋಕದಲ್ಲಿ, ರಕ್ಷಿಸಲ್ಪಟ್ಟವರು ಬಿಳಿ ನಿಲುವಂಗಿಯನ್ನು ತೊಟ್ಟವರಾಗಿರುತ್ತಾರೆ (ಪ್ರಕಟಣೆ 7:13, 14). ಗಲಾತ್ಯ 3:27ರಲ್ಲಿ ನಾವು ಓದುವಂತೆ, "ಕ್ರಿಸ್ತನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡಿರುವ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ." *ನೀವು ಕ್ರಿಸ್ತನನ್ನು ಧರಿಸಿಕೊಂಡಿದ್ದೀರಿ.* NEBಯಲ್ಲಿ ಹೇಳುವ ಹಾಗೆ "ವಸ್ತ್ರದ ಹಾಗೆ ನೀವು ಎಲ್ಲವನ್ನು ಕ್ರಿಸ್ತನ ಮೇಲೆ ಹೊಂದಿದ್ದೀರಿ."

ಹೇಗೋ, ಕೊಲಸ್ಸೆ 3:1-3ರಲ್ಲಿ, ಪುನರುತ್ಥಾನಕ್ಕೆ ಕ್ರೈಸ್ತನ ಪರಿವರ್ತನೆಯು ಪೌಲನಿಗೆ ಬೇಕಾದುದ್ದಾಗಿದ್ದು, ಇದು ಬದಲಾಯಿಸುವ ಬಟ್ಟೆಯಂತೆ ಎಂದೂ ಸಹ ಆತನು ಹೇಳುತ್ತಾನೆ:

> ... ನೀವು ಪೂರ್ವಸ್ವಭಾವವನ್ನು ಅದರ ಕೃತ್ಯಗಳನ್ನು ಕೂಡಾ ತೆಗೆದಿಟ್ಟು ನೂತನ ಸ್ವಭಾವವನ್ನು ಧರಿಸಿಕೊಂಡಿದ್ದೀರಲ್ಲವೇ. ಈ ಸ್ವಭ್ಞಾವವು ಅದನ್ನು ಸೃಷ್ಟಿಸಿದಾತನ ಹೋಲಿಕೆಯ ಮೇರೆಗೆ ದಿನೇ ದಿನೇ ನೂತನವಾಗುತ್ತಾ ... ಹೀಗಿರಲಾಗಿ ನೀವು ದೇವರಿಂದ ಆರಿಸಿಕೊಂಡವರೂ, ಪ್ರತಿಷ್ಟಿತರೂ, ಪ್ರೀಯರೂ ಆಗಿರುವುದರಿಂದ ಕನಿಕರ ದಯೆ ದೀನಾಭಾವ ಸಾತ್ವಿಕತ್ವ ದೀರ್ಘಶಾಂತಿ ಎಂಬ ಸದ್ಗುಣಗಳನ್ನು ಧರಿಸಿಕೊಳ್ಳಿರಿ (ಕೊಲಸ್ಸೆ 3:9-12).

ಆ ವಿಚಾರವು ಹೀಗಿದೆ: ನೀವು ಹಳೆಯ ಜೀವಿತಕ್ಕೆ ಸತ್ತವರಾಗಿದ್ದೀರಿ; ನೀವು ಹೊಸ ಜೀವಿತದೊಡನೆ ಎಬ್ಬಿಸಲ್ಪಡುತ್ತೀರಿ; ಈಗ ನೀವು ಬಟ್ಟೆಯನ್ನು ಧರಿಸಿದ್ದೀರಿ - ನಿಮ್ಮ ವಸ್ತ್ರವನ್ನು ಬದಲಾಯಿಸಿರಿ - ನಿಮ್ಮ ಹೊರ ರೂಪಕ್ಕೆ ಹೊಂದುವಂಥ ತರದ ಬಟ್ಟೆಗಳನ್ನು ನೀವು ಧರಿಸಿರಿ.

ನೀವು ಧರಿಸಲಿರುವ ಈ ಹೊಸ ವಸ್ತ್ರಗಳನ್ನು ಗಣನೆಗೆ ತಂದುಕೊಳ್ಳಿರಿ:

**ಇತರರ ಬಗೆಗೆ ಕಾಳಜಿಯುಳ್ಳವರಾಗಿರಿ**

ಈ ಕಾಳಜಿಯು ಎರಡು ಮಾತಿನಲ್ಲಿ ವ್ಯಕ್ತವಾಗಿದೆ: ಮೊದಲನೆಯದಾಗಿ "ಅನುಕಂಪ" - ಇದು ಯಾವಾಗಲೂ ಕ್ರೈಸ್ತನನ್ನು ಲಕ್ಷೀಕರಿಸುವ ಲಕ್ಷಣವಾಗಿದೆ! ಕ್ರೈಸ್ತನಾದವನು ಯಾವಾ ಗಲೂ ಇತರರ ಬಗೆಗೆ ಮತ್ತು ಇತರರ ಅವಶ್ಯಕತೆಯ ಬಗೆಗೆ ಕಾಳಜಿಯುಳ್ಳವನಾಗಿರುತ್ತಾನೆ. ಎರಡನೆಯದಾಗಿ, "ಕರುಣೆ" ಕ್ರೈಸ್ತನನ್ನು ಲಕ್ಷಿಕರಿಸುವುದಾಗಿದೆ. ಇದು ಇತರರನ್ನು ಅವಮಾನಿಸಲು ಮತ್ತು "ಅವರನ್ನು ಕತ್ತರಿಸಲು" ವೇಗವಾಗಿ ಮುಂದೆ ಬರಲು ಮತ್ತು ತೀಕ್ಷ್ಣವಾದ ವರದಿಗೆ ಸಮರ್ಥವಾಗಲು, ಜಗತ್ತು ಸುಂದರವೂ ತೀಕ್ಷಣವೂ ಆಗಿದೆ ಎಂದು ಯೋಚಿಸಬಹುದಾಗಿದೆ. ಇದಕ್ಕೆ ವ್ಯತ್ಯಾಸವಾಗಿ ಕ್ರೈಸ್ತರು ಯಾವಾಗಲೂ ತಾವು ಭೇಟಿ ಯಾಗುವ ಪ್ರತಿಯೊಬ್ಬರ ಜೀವಿತವನ್ನು ಸರಾಗವಾಗಿಸುವ ಪ್ರಯತ್ನವನ್ನು ಮಾಡುತ್ತಾರೆ.

**ನಮ್ರತೆಯನ್ನು ಧರಿಸಿಕೊಳ್ಳಿರಿ**

ಎರಡು ಪದಗಳು ಈ ವಿಚಾರವನ್ನು ಒತ್ತಿ ಹೇಳುವವುಗಳು ಆಗಿವೆ. ಮೊದಲನೆಯದು "ದೈನ್ಯತೆ" ಆಗಿದೆ KJVಯು ಇದನ್ನು "ಮನಸ್ಸಿನ ದೀನತೆ" ಎಂದು ಭಾಷಾಂತರಿಸಿದೆ; NEBಯು "ನಮ್ರತೆ" ಎಂದು ಹೇಳುತ್ತದೆ. ಕ್ರೈಸ್ತರು "ಕೊಚ್ಚಿಕೊ ಳ್ಳುವವರು" ಆಗಿರುವುದಿಲ್ಲ. ಆತನು ಪಾಪಿಯೆಂದು ಗುರುತಿಸಲ್ಪಟ್ಟಿದ್ದಾದರೆ, ಆತನು ಕೃಪೆಯಿಂದ ರಕ್ಷಿಸಲ್ಪಟ್ಟಿದಾನೆ, ಕ್ರಿಸ್ತನಿಲ್ಲದೆ ಆತನು ಏನೂ ಅಲ್ಲದವನಾಗಿದ್ದಾನೆ. ಎರಡನೆಯದು "ಸಾತ್ವಿಕತ್ವ" ಆಗಿದೆ. ಈ ಪದವನ್ನು NEBಯು "ಸೌಮ್ಯತೆ" ಎಂದು ಭಾಷಾಂತರಿಸಿದೆ. "ಸಾತ್ವಿಕತ್ವವು" ಬಲ ಹೀನತೆಯಲ್ಲ; ಇದು ನಿಯಂತ್ರಣದಲ್ಲಿರುವ ಬಲವಾಗಿದೆ. ಕ್ರೈಸ್ತರು ಇತರರೊಂದಿಗೆ ಮೃದುವಾಗಿ ವ್ಯವಹರಿಸುವುದರ ಮೂಲಕ "ಸಾತ್ವಿಕತ್ವವನ್ನು" ಪ್ರಯೋಗಿಸುವವರಾಗಿದ್ದಾರೆ.

**ನಮ್ಮನ್ನು ನಿರಾಶೆಮಾಡಿದವರಿಗೆ ಮತ್ತು ನೋಯಿಸಿದವರಿಗೆ ಪ್ರತಿಯಾಗಿ**

**ಯೋಗ್ಯವಾದ ಭಾವನೆಯನ್ನು ಇಟ್ಟುಕೊಳ್ಳುವದು**

ಕ್ಲಿಷ್ಟಕರವಾದ ಸಂದರ್ಭಗಳಲ್ಲಿ ಕ್ರೈಸ್ತರು ಹೇಗೆ ಪ್ರತಿಕ್ರಯಿಸಬೇಕೆಂದು ವರ್ಣಿಸಿರುವದು ಮೂರು ಪದಗಳಲ್ಲಿ ಕಂಡುಬರುತ್ತದೆ. ಮೊದಲನೆಯದಾಗಿ ತಾಳ್ಮೆಯು ಕ್ರೈಸ್ತನನ್ನು ಲಕ್ಷೀಕರಿಸು ವುದಾಗಿದೆ. KJVಯು ಈ ಪದವು "ಸಹಿಸಿಕೊಳ್ಳುವಿಕೆ" ಎಂದು ಭಾಷಾಂತರಿಸಲ್ಪಟ್ಟಿದೆ. ಈ ವಿಚಾರವು ಬಹುಶಃ ಕ್ರೈಸ್ತನು ಸಂಕಟದಲ್ಲಿ ತಾಳಿಕೊಳ್ಳುವವನಾಗಿದ್ದಾನೆ; ಆತನು "ತೊಂದರೆಯನ್ನು ಪಡೆದಾಗ್ಯೂ" ಕೂಡಾ ಆತನು "ತನ್ನ ದೈವನಿಷ್ಟೆಯನ್ನು ಕಳಕೊಳ್ಳಲಾರನು" ಎರಡನೆಯದಾಗಿ, *"ಸಹಿಷ್ಣತೆ"* ಕ್ರೈಸ್ತನನ್ನು ಲಕ್ಷೀಕರಿಸುವುದಾಗಿದೆ. ಕ್ರೈಸ್ತನು ದುಷ್ಟ ಜನರೊಡನೆ ಇರಿಸಲ್ಪಡುವನು. ಇತರರು ಬಲಹೀನರಾಗಿದ್ದಾರೆ; ಅವರು ತಪ್ಪುಗಳನ್ನು ಮಾಡುವವರಾಗಿದ್ದಾರೆ; ಅವರು ಚತುರೋಕ್ತಿಯ ಮಾತುಗಳಿಂದ ಆತನನ್ನು ಪೀಡಿಸುವವರಾಗಿದ್ದಾರೆ ನಾವೇನು ಮಾಡಬೇಕು? ಇದು ಬಹುಶಃ ಕಲಿಯಲಿ ಅವರೊಡನೆ ಇಡಲು ಮತ್ತುಅವರು ತಪ್ಪಿನಲ್ಲಿದ್ದಾಗಲೂ ಕೂಡ ಅವರನ್ನು ಪ್ರೀತಿಸುವಲ್ಲಿ ನಾವು ಮಾಡುವ ಎಲ್ಲವೂ ಇಲ್ಲಿ ಇರುವುದಾಗಿರಬಹುದು. ಮೂರನೆಯದು ಕ್ಷಮಾಪಣೆ ಕ್ರೈಸ್ತರನ್ನು ಲಕ್ಷೀ ಕರಿಸುವಂತದ್ದು ಆಗಿದೆ (ಕೊಲಸ್ಸೆ 3:13). *ಸಭೆಯಲ್ಲೂ ಕೂಡಾ,* ಸದಸ್ಯರು ಒಬ್ಬರಿಗೊಬ್ಬರು ದೋಷಾರೋಪಣೆಯನ್ನು ಹೊಂದಿದವರಾಗಿರುತ್ತಾರೆ! ನಂತರ ಏನು? ಒಬ್ಬರ ಕಡೆಗೆ ಒಬ್ಬರು ಹೋಗಲು ಇದು ಕಲಿಸುವಂತದ್ದಾಗಿದೆ ಎಂಬ ಇನ್ನೊಂದು ಪರಿಚ್ಛೇದವನ್ನು ಮರೆಯಬಾರದು, ಮೂಲ "ತಳಹದಿ" ಎಂದರೆ *ನಾವು ಕ್ಷಮಿಸಬೇಕು ಎಂಬುದೇ!*

**ಎಲ್ಲದರ ಮೇಲೆ ಪ್ರೀತಿಯನ್ನು ಧರಿಸಿಕೋ**

"ಎಲ್ಲದರ ಮೇಲೆ ಪ್ರೀತಿಯನ್ನು ಧರಿಸಿಕೊಳ್ಳಿರಿ; ಅದು ಸಮಸ್ತವನ್ನು ಸಂಪೂರ್ಣಮಾಡುವ ಬಂದವಾಗಿದೆ" (ಕೊಲಸ್ಸೆ 3:14) ಎಂದು ಪೌಲನು ಹೇಳುತ್ತಾನೆ. ಪ್ರೀತಿಯು ಮೂಲವಾದ ನೈತಿಕ ವಸ್ತುವೂ, ಅತಿ ಹೆಚ್ಚು ಅವಶ್ಯವಿರುವಂಥದ್ದು, ಕಿರೀಟಪ್ರಾಯವಾದ ಮಹಿಮೆ, ಮತ್ತು ಕ್ರಿಸ್ತೀಯ ವ್ಯಕ್ತಿತ್ವದ ಅನನ್ಯ ಸಾಧನೆಯಾಗಿದೆ. ಪ್ರೀತಿಯು ಬಲು ಮುಖ್ಯವಾದದ್ದು, ಮತ್ತು "ಪ್ರೀತಿಯು ಐಕ್ಯತೆಯ ಪರಿಪೂರ್ಣ ಸಂಕೋಲೆಯಾಗಿದೆ." ಇದರ ಅರ್ಥವು ಇತರ ಎಲ್ಲಾ ಲಕ್ಷಣಗಳು ಒಂದೇ ವ್ಯಕ್ತಿತ್ವದಲ್ಲಿ ಪ್ರೀತಿಯಿಂದ ಯೋಗ್ಯವಾದ ಅಳತೆಯಲ್ಲಿ ಒಟ್ಟಾಗಿ ಇರಿಸಿದಂತೆ ಅಥವಾ ಕ್ರೈಸ್ತನು ಜೊತೆಯಾಗಿ ಸಮಾಧಾನದಿಂದ ವಾಸಿಸಲು ಪ್ರೀತಿಯು ಇದನ್ನು ಸಾಧ್ಯಮಾಡುತ್ತದೆ ಎಂದು ಹೇಳುವುದಾಗಿದೆ.

**ಸಭೆಯನ್ನು ಕಟ್ಟುವ ಗುಣಗಳನ್ನು ನಡವಳಿಕಯನ್ನು ಧರಿಸಿಕೊಳ್ಳಿರಿ**

ದೇವರ ಜನರಾಗಿ ನಾವು ಜೊತೆಯಾಗಿ ಜೀವಿಸುವ ನಮ್ಮ ಜೀವಿತದಲ್ಲಿ ಮೂರು

ಲಕ್ಷಣಗಳಿವೆ. *ಸಮಾಧಾನವು* ಕ್ರೈಸ್ತ ಸಮುದಾಯದ ಲಕ್ಷಣವಾಗಿರಬೇಕು (ಕೊಲಸ್ಸೆ 3:15ಎ). ಶಾಂತಿಯು ಕ್ರೈಸ್ತರಲ್ಲಿ ವ್ಯಕ್ತಿಗತವಾಗಿ ಆಳುವುದಾಗಿದೆ. ಒಬ್ಬ ಕ್ರೈಸ್ತನು ದೇವರೊಂದಿಗೆ ಶಾಂತಿಯಿಂದ ಇದ್ದಾಗ ಆತನು ಇತರರೊಡನೆ ಶಾಂತಿಯಿಂದ ಇರುತ್ತಾರೆ. ಮೇಲಾಗಿ, *ಕೃತಜ್ಞತೆಯ* ಲಕ್ಷಣವು ಕ್ರಿಸ್ತೀಯ ಸಮುದಾಯದಲ್ಲಿ ಇರಲೇಬೇಕಾದ ಲಕ್ಷಣ (ಕೊಲಸ್ಸೆ 3:15ಬಿ). ನಾವು ವ್ಯಕ್ತಿಗತವಾಗಿ ಕೃತಜ್ಞತೆಯುಳ್ಳವರಾಗಿರಬೇಕು, ಮತ್ತು ಜೊತೆಯಾಗಿ ಆರಾಧನೆ ಮಾಡುವಾಗ ಚರ್ಚು ತನ್ನ ಕೃತಜ್ಞತಾ ಸ್ತುತಿಯನ್ನು ಸಾಂಘಿಕವಾಗಿ ನಿರಂತರವಾಗಿ ವ್ಯಕ್ತಪಡಿಸಬೇಕು. *ಆರಾಧನೆಯ* ಲಕ್ಷಣವು ಕ್ರಿಸ್ತೀಯ ಸಮುದಾಯದಲ್ಲಿ ಇರಲೇಬೇಕು (ಕೊಲಸ್ಸೆ 3:16). ಕ್ರೈಸ್ತರು ನಿರಂತರವಾಗಿ ದೇವರನ್ನ ಆರಾಧನೆ ಮಾಡುತ್ತಿರುತ್ತಾರೆ. ನಿರ್ದಿಷ್ಟವಾಗಿ ಕ್ರೈಸ್ತರು ದೇವರನ್ನು ಸ್ತುತಿಸುವಂತವರೂ ಮತ್ತು ಹಾಡುಗಳ ಮೂಲಕ ಒಬ್ಬರನ್ನೊಬ್ಬರು ಎಚ್ಚರಿಸುವಂತರೂ ಆಗಿರುತ್ತಾರೆ.

## ಮುಕ್ತಾಯ

ನಾವು ಏನು ಹೇಳಿದ್ದೇವೆ ಅದನ್ನು ನಾವು ಹೇಗೆ ಕ್ರೂಡೀಕರಿಸಬಹದು? ಕ್ರಿಸ್ತೀಯ ವ್ಯಕ್ತಿತ್ವವನ್ನು ವರ್ಣಿಸಲು ನಾವು ಪ್ರಯತ್ನಿಸುವಾ. ಅದನ್ನು ನೀವು ನೋಡಿದ್ದಾದರೆ ಅವುಗಳಲ್ಲಿ ಒಂದನ್ನು ನೀವು ಹೇಗೆ ಗುರುತಿಸುವಿರಿ?

ತನ್ನನ್ನು ತಾನು ಸಂಪೂರ್ಣವಾಗಿ ಕರ್ತನಿಗೆ ಒಪ್ಪಿಸಿಕೊಂಡ, ಕ್ರಿಸ್ತನಿಂದ ರಕ್ಷಿಸಲ್ಪಟ್ಟ ಒಬ್ಬನನ್ನು ಊಹಿಸಿಕೊಳ್ಳಿರಿ. ಆತ್ಮೀಕ ಸಂಗತಿಗಳಿಗಿಂತ ಹೆಚ್ಚಾಗಿ, ಐಹಿಕ ಸಂಗತಿಗಳು ಆತನ ಜೀವಿತವನ್ನು ಆಳವವುಗಳು ಆಗರುತ್ತವೆ. ಕ್ರಿಸ್ತನು ತನಗಾಗಿ ಏನು ಮಾಡಿದ್ದಾನೆಂದು ಯೋಚಿ ಸುವುದರಲ್ಲಿ ಸಮಯ ಕಳೆಯುವವನಾಗಿರುತ್ತಾನೆ. ಕ್ರಿಸ್ತನು ಅವನಿಂದ ಏನನ್ನು ಮಾಡಬೇಕೆಂದು ಅಪೇಕ್ಷಿಸುತ್ತಾನೋ ಅದನ್ನು ಮಾಡುವುದೇ ಅವನ ಗುರಿ. ಆತನು ತನ್ನಷ್ಟಕ್ಕೆ ತಾನೇ ಕ್ರಿಸ್ತನಲ್ಲಿ ಮುಳುಗಿ ಹೋಗಿರುತ್ತಾನೆ ಮತ್ತು ಕ್ರಿಸ್ತನ ಜೊತೆ ಮಹಿಮೆಯಲ್ಲಿ ಇರುವ ದಿನವು ಯಾವಾಗ ಬರುತ್ತದೋ ಎಂಬುದನ್ನು ಎದುರುನೋಡುವ ಯೋಚನೆಯಲ್ಲಿರುತ್ತಾನೆ.

ಅದೇ ಸಮಯದಲ್ಲಿ, ಆತನು ಲೌಕಿಕವಾದುದನ್ನು ವರ್ಜಿಸುವಲ್ಲಿ ತನ್ನಿಂದಾದಷ್ಟು ಪ್ರಯತ್ನಮಾಡುತ್ತಾನೆ. ಆತನು ಕ್ರಿಸ್ತನ ಹಾಗಿರಲು ಪ್ರಯತ್ನಿಸುತ್ತಾನೆ. ಆತನು ಅನುಕಂಪ ಉಳ್ಳವನೂ, ಕರುಣೆಯುಳ್ಳವನೂ, ದೀನತೆಯುಳ್ಳವನೂ, ಸಾಧುತ್ವ ಉಳ್ಳವನೂ, ಸಹನೆಯುಳ್ಳವನೂ, ಕ್ಷಮೆಯುಳ್ಳವನೂ, ಮತ್ತು ಪ್ರೀತಿಸುವವನೂ ಆಗಿರುತ್ತಾನೆ. ಆತನು ಯಾವಾಗಲೂ ದೇವರಿಗೆ ಕೃತಜ್ಞತೆಯನ್ನು ಹೇಳುವವನಾಗಿರುತ್ತಾನೆ. ವ್ಯಕ್ತಿಗತವಾಗಿ ಕ್ರಿಸ್ತೀಯ ವ್ಯಕ್ತಿತ್ವವು ಕೊಲಸ್ಸೆ 3:17ಕ್ಕೆ ವಿಧೇಯವಾಗುವದು ಆತನಿಗೆ ಯೋಗ್ಯವಾದದ್ದು ಆಗಿದೆ: “ನೀವು ನುಡಿಯಿಂದಾಗಲಿ ನಡೆಯಿಂದಾಗಲಿ ಏನು ಮಾಡಿದರೂ ಅದೆಲ್ಲವನ್ನೂ ಕರ್ತನಾದ ಯೇಸುವಿನ ಹೆಸರಿನಲ್ಲಿಯೇ ಮಾಡಿರಿ ಆತನ ಮೂಲಕ ತಂದೆಯಾದ ದೇವರಿಗೆ ಕೃತಜ್ಞತಾ ಸ್ತುತಿ ಮಾಡಿರಿ” ದೇವರಿಗೆ ಕೃತಜ್ಞತಾಸ್ತುತಿ ಮಾಡಿರಿ. ನೀವು ಹಾಗೆ ಮಾಡಿದ್ದಾದರೆ, ನೀವು ನಿಜವಾಗಿಯೂ ಕ್ರಿಸ್ತೀಯ ವ್ಯಕಿತ್ವವನ್ನು ಯಶಸ್ವಿಯಾಗಿ ಹೊಂದಿಕೊಂಡಂತಾಗುತ್ತದೆ.